ಓ.ಎಸ್. ನಂಬರ 11/2018

ಪಿ.ಡಬ್ಲ್ಯೂ-1

**ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 16-01-2025.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಸಿ ಎಸ್ ಜಿ., ವಕೀಲರಿಂದಃ**

ನಾನು ಗುತ್ತಿಗೆದಾರರ ಹತ್ತಿರ ಕೆಲಸಕ್ಕೆ ಹೋಗುತ್ತೇನೆ. ವಾದಿ ನಮ್ಮ ತಂದೆ. ಈ ದಾವೆಯನ್ನು ಹೂಡುವ ಕಾಲಕ್ಕೆ ಸಂಪೂರ್ಣ ಮಾಹಿತಿಯನ್ನು ನಮ್ಮ ತಂದೆಯವರೇ ಕೊಟ್ಟಿರುತ್ತಾರೆ. ದಾವಾಸ್ತಿ ಎಂದು ಕಾಣಿಸಿರುವ ಜಾಗೆಯು ಸರ್ವೇ ನಂ.90 ರ ಭಾಗವಾಗಿದ್ದು, ಸರ್ವೇ ನಂ. 98 ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ವರ್ಣಿಸಿದ ಆಸ್ತಿಯು ಅರಣ್ಯ ಇಲಾಖೆಗೆ ಸೇರಿದ ಜಮೀನು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದನ್ನು ನಾವು ಅತಿಕ್ರಮಣ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಕೃಷಿ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಜಮೀನು ಅರಣ್ಯ ಇಲಾಖೆಗೆ ಸೇರಿದ್ದಾಗಿದ್ದು, ನಾವು ಅದನ್ನು ಅತಿಕ್ರಮಣ ಮಾಡಿ, ಸಾಗುವಳಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ದಾವಾಸ್ತಿಯ ಉತ್ತರಕ್ಕೆ ಬೊಮ್ಮನಳ್ಳಿ-ಕಾತೂರ ರಸ್ತೆ ಇದೆ, ದಕ್ಷಿಣಕ್ಕೆ ಸರ್ವೇ ನಂ.90 ಬರುತ್ತದೆ. ಬೊಮ್ಮನಳ್ಳಿ ರಸ್ತೆಗೆ ಮತ್ತು ಸರ್ವೇ ನಂ. 90 ಕ್ಕೆ ಎಷ್ಟು ಅಂತರ ಇದೆ ಎಂದರೆ ತುಂಬಾ ಗ್ಯಾಪ್ ಇದೆ ಎಂದು ನುಡಿಯುತ್ತಾರೆ. ಎಷ್ಟು ಅಂತರ ಎಂದರೆ ಸುಮಾರು 50 ರಿಂದ 60 ಮೀ.ಎಂದು ನುಡಿಯುತ್ತಾರೆ. ಸರ್ವೇ ನಂ.90 ಅಂದಾಜು 10 ಎಕರೆ 10 ಗುಂಟೆ ಇದೆ. ಬೊಮ್ಮನಳ್ಳಿ ರಸ್ತೆ ಸರ್ವೇ ನಂ. 90 ರ ಯಾವ ದಿಕ್ಕಿಗೆ ಇದೆ ಎಂದರೆ ಸರ್ವೇ ನಂ.90 ಸರ್ವೇ ನಂ.98 ಕ್ಕೆ ತಾಗಿಕೊಂಡಿದ್ದು, ಬೊಮ್ಮನಳ್ಳಿ ರಸ್ತೆ ಸರ್ವೇ ನಂ.98 ಕ್ಕೆ ತಾಗಿಕೊಂಡಿದೆ ಎಂದು ನುಡಿಯುತ್ತಾರೆ. ಸರ್ವೇ ನಂ.90 ರ ಉತ್ತರ ದಿಕ್ಕಿಗೆ ಬೊಮ್ಮನಳ್ಳಿ ರಸ್ತೆ ಬರುತ್ತದೆ. ದಾವಾಸ್ತಿಯ ಒಟ್ಟು ಕ್ಷೇತ್ರ 35 ಗುಂಟೆ ಇರುತ್ತದೆ. ಸರ್ವೇ ನಂ.90 ಮತ್ತು ಬೊಮ್ಮನಳ್ಳಿ ರಸ್ತೆ ಕೂಡಿದೆ ಎಂದರೆ ಸರಿಯಲ್ಲ. ಸರ್ವೇ ನಂ.90 ರ ಉತ್ತರ ದಿಕ್ಕಿಗೆ ಸರ್ವೇ ನಂ.98 ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಯಾವ ದಾಖಲೆಯನ್ನು ಹಾಜರುಪಡಿಸಿದ್ದೀರಿ ಎಂದರೆ ಅರಣ್ಯ ಇಲಾಖೆಯು ಜಿಪಿಎಸ್ ಮಾಡಿದ್ದು, ಅದನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾವು ಹೇಳುವ ಸರ್ವೇ ನಂ.98 ರ ಭಾಗ ಅಸ್ತಿತ್ವದಲ್ಲೇ ಇಲ್ಲ ಎಂದರೆ ಸರಿಯಲ್ಲ. ನಾವು ಹೇಳುವ ದಾವಾಸ್ತಿಗೆ ಸರ್ವೇ ನಂ.90 ರ ಯಾವ ಭಾಗವೂ ತಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.90 ನ್ನು ಈಗ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾನೆ. ಸರ್ವೇ ನಂ.90 ರ ಸುಮಾರು 4 ಎಕರೆ ಚಿಲ್ಲರೆ ಪ್ರದೇಶವನ್ನು ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾನೆ. ಸರ್ವೇ ನಂ.90 ರಲ್ಲಿ ಸುಮಾರು 4 ಎಕರೆ ಚಿಲ್ಲರೆ ಜಮೀನು ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎಂದರೆ ಪಿತ್ರಾರ್ಜಿತವಾಗಿ ಬಂದಿರಬಹುದು. ನಾವು ಮತ್ತು

ಪ್ರತಿವಾದಿ ಸಂಬಂಧಿಕರು ಎಂದರೆ ಸರಿ. ಪ್ರತಿವಾದಿ ದತ್ತಕ ಬಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿಯನ್ನು ನಮ್ಮ ಅಜ್ಜನವರಾದ ರುದ್ರಯ್ಯ ಹಿರೇಮಠ ರವರು ದತ್ತಕ ಪಡೆದುಕೊಂಡಿರುತ್ತಾರೆ. ಪ್ರತಿವಾದಿಯನ್ನು ನಮ್ಮ ಅಜ್ಜ ದತ್ತಕ ಪಡೆದುಕೊಳ್ಳುವ ಸಮಯಕ್ಕೆ ಎಷ್ಟು ಆಸ್ತಿ ಇತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಿರ್ಮಲ ಎನ್ನುವವರು ಪ್ರತಿವಾದಿಯ ಸಹೋದರಿ. ನಿರ್ಮಲರವರಿಗೆ 1 ಎಕರೆ 14 ಗುಂಟೆ ಆಸ್ತಿಯನ್ನು ಕೊಟ್ಟಿರುತ್ತಾರೆ. ಸದರಿ 1 ಎಕರೆ 14 ಗುಂಟೆ ಕ್ಷೇತ್ರ ಸರ್ವೆ ನಂ.90 ರ ಉತ್ತರ ಭಾಗಕ್ಕೆ ಇದೆ. ಹಾಗಾದರೆ ಸರ್ವೆ ನಂ.90 ರ ಯಾವ ದಿಕ್ಕಿಗೆ ಪ್ರತಿವಾದಿಯ ಆಸ್ತಿ ಬರುತ್ತದೆ ಎಂದರೆ ದಕ್ಷಿಣ-ಪೂರ್ವಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಸರ್ವೆ ನಂ.90 ರಲ್ಲಿ 3 ಎಕರೆ 16 ಗುಂಟೆ ಜಮೀನು ಇದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾಸ್ತಿ ಎಂದು ಕಾಣಿಸಿರುವ ಜಾಗವನ್ನು ನಮ್ಮದಾಗಿಸಿಕೊಳ್ಳಬೇಕೆಂದು ನಾವು ಸುಮಾರು 50 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆ ಎಂದರೆ ನಾವು ಸಾಗುವಳಿ ಮಾಡುತ್ತಾ ಬಂದಿದ್ದೇವೆ ಎಂದು ನುಡಿಯುತ್ತಾರೆ. ಸದರಿ ದಾವಾಸ್ತಿ ನಮಗೆ ಸೇರಿರುತ್ತದೆ ಎಂದು ತೋರಿಸಲು ಮೋಜಣಿಯನ್ನೇನಾದರೂ ಮಾಡಿಸಿದ್ದೀರಾ ಎಂದರೆ ನಾವು ಅರ್ಜಿಯನ್ನು ಕೊಟ್ಟಿದ್ದು ಅವರು ಮೋಜಣಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಮೋಜಣಿ ಮಾಡಿಸಿಕೊಳ್ಳಲು ಪ್ರಯತ್ನ ಮಾಡಿರುತ್ತೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ಮೋಜಣಿ ಮಾಡಿಸಿದರೆ ದಾವಾಸ್ತಿ ಎಂದು ಕಾಣಿಸಿರುವ ಜಮೀನು ಕೈ ತಪ್ಪಿ ಹೋಗುತ್ತದೆ ಎಂದು ನಾವು ಮೋಜಣಿ ಮಾಡಿಸಿರುವುದಿಲ್ಲ ಎಂದರೆ ಸರಿ. ಮೋಜಣಿ ಮಾಡಿಸಿದಾಗ ಸದರಿ ದಾವಾ ಆಸ್ತಿ ಎಂದು ಕಾಣಿಸಿರುವ ಕ್ಷೇತ್ರ ಅರಣ್ಯ ಇಲಾಖೆಗೆ ಸಂಬಂಧಪಟ್ಟಿರುತ್ತದೆ ಎಂದು ತೋರಿಸಿದಲ್ಲಿ ನಾವು ಬಿಟ್ಟುಕೊಡಲು ಸಿದ್ಧರಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವೇ ಸಾಗುವಳಿ ಮಾಡುತ್ತಾ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ದಾವಾಸ್ತಿಗೆ ಸಂಬಂಧಿಸಿದಂತೆ ಈ ನ್ಯಾಯಾಲಯದಲ್ಲಿ ಸದರಿ ದಾವೆಯನ್ನು ಹೊರತುಪಡಿಸಿ ಮತ್ತೊಂದು ಕ್ರಿಮಿನಲ್ ಪ್ರಕರಣ ಬಾಕಿ ಇದೆ. ಸದರಿ ಪ್ರಕರಣದ ನಂಬರ್ ನನಗೆ ಹೇಳಲು ಬರುವುದಿಲ್ಲ. ದಾವಾಸ್ತಿಗೆ ಸಂಬಂಧಿಸಿದಂತೆ ಅಸಲು ದಾವಾ ಸಂಖ್ಯೆ 59/2014 ಇದೆ ಎಂದರೆ ನಮ್ಮ ತಂದೆಯವರ ನಂತರ ನಾನು ಆ ಬಗ್ಗೆ ಫಾಲೋ ಮಾಡಿರುವುದಿಲ್ಲ. ಸದರಿ ಅಸಲು ದಾವಾ ಸಂಖ್ಯೆ 59/2014 ನ್ನು ನನ್ನ ತಂದೆಯವರಾದ ಶಿವಲಿಂಗಯ್ಯರವರು ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಯಾರ ವಿರುದ್ಧ ದಾಖಲು ಮಾಡಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಯಾವ ಪರಿಹಾರವನ್ನು ಕೇಳಿ ನಮ್ಮ ತಂದೆಯವರು  ಅಸಲು ದಾವಾ ಸಂಖ್ಯೆ 59/2014 ನ್ನು ದಾಖಲಿಸಿದ್ದರು ಎಂದು ನನಗ ತಿಳಿದಿಲ್ಲ. ಸಾಕ್ಷಿಯು ಮುಂದುವರೆದು ದಾವಾಸ್ತಿಗೆ ಸಂಬಂದಿಸಿದಂತೆ ದಾಖಲು ಮಾಡಿದ್ದರು ಎಂದು

ನುಡಿಯುತ್ತಾರೆ. ಸದರಿ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಅಸಲು ದಾವಾ ಸಂಖ್ಯೆ 59/2014 ರಲ್ಲಿ ಈ ದಾವೆಯಲ್ಲಿ ದಾವಾಸ್ತಿ ಎಂದು ಕಾಣಿಸಿದ ಜಾಗೆಯನ್ನು ಸರ್ವೇ ನಂ.90 ಎಂದು ಕಾಣಿಸಲಾಗಿತ್ತು ಎಂದರೆ ನನಗೆ ಆ ದಾವೆಯ ಬಗ್ಗೆ ಮಾಹಿತಿ ಇಲ್ಲ. ದಾವಾಸ್ತಿ ಎಂದು ಕಾಣಿಸಿದ ಜಾಗೆಯು ಉತ್ತರ ಮತ್ತು ವಾಯುವ್ಯ ದಿಕ್ಕಿನ ಮೂಲೆಯಲ್ಲಿ ಇದೆ ಎಂದರೆ ಸರಿ. ದಾವಾಸ್ತಿ ಕಾತೂರ ಗ್ರಾಮದಲ್ಲಿ ಇದೆ ಎಂದರೆ ಸರಿ. ದಾವಾಸ್ತಿಯು ಉತ್ತರ ಮತ್ತು ಪಶ್ಚಿಮಕ್ಕೆ ತಾಗಿ ಇದೆ ಎಂದರೆ ಸರಿ. ನಮ್ಮ ತಂದೆಯವರು 1974 ನೇ ಇಸ್ವಿಯಲ್ಲಿ ನಮ್ಮ ಅಜ್ಜನವರಾದ ರುದ್ರಯ್ಯರವರ ವಿರುದ್ಧ ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೂಲ ದಾವಾ ಸಂಖ್ಯೆ 197/1975 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರ ಚಿತಾವಣೆಯಿಂದಲೇ ಸದರಿ ದಾವೆಯನ್ನು ದಾಖಲಿಸಲಾಗಿತ್ತು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದು, ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

**-Sd-**

**ಸಿವಿಲ್ ಜಡ್ಜ, ಮುಂಡಗೋಡ.**